**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 31/2025**

**ಚಾ.ಸಾಃ 4, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಪ್ರಶಾಂತ ನಾಯ್ಕ |
| ತಂದೆಯ ಹೆಸರು | ಶೇಷಗಿರಿ |
| ವಯಸ್ಸು | 47 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಬರಗದ್ದೆ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 26-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಈಗ್ಗೆ ಮೂರು ತಿಂಗಳ ಹಿಂದೆ ಪೋಲೀಸರುನನ್ನನ್ನು ಮತ್ತು ಚಾಸಾ-5 ರವರನ್ನು ಠಾಣೆಗೆ ಕರೆಸಿದ್ದು ಆರೋಪಿತರು ಚಾಸಾ-1 ರವರಿಗೆ ಹೆದರಿಸಿ ಗಲಾಟೆ ಮಾಡಿದ ವಿಚಾರವಾಗಿ 1 ನೇ ಆರೋಪಿ ಒಂದು ದೊಣ್ಣೆಯನ್ನು ಪೋಲೀಸರಿಗೆ ಕೊಟ್ಟಿದ್ದು, ಪೋಲೀಸರು ಆ ಕಾಲಕ್ಕೆ ನನ್ನ ಫೋಟೋ ತೆಗೆದು ಒಂದು ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಫೋಟೋವನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೋಲೀಸರು ಇನ್ನೊಂದು ದಾಖಲೆಗೆ ನನ್ನ ಸಹಿ ತೆಗೆದುಕೊಂಡಿದ್ದು ಈಗ ಅದನ್ನು ನೋಡುತ್ತಿದ್ದು ಅದು ಹ್ಯಾಶಿಂಗ್ ವರದಿಯಾಗಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಪೋಲೀಸ್ ಠಾಣೆಯಲ್ಲಿ ಅಮಾನತ್ತುಪಡಿಸಿಕೊಂಡ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಮುಮಾ-1 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಪೋಲೀಸರು ಠಾಣೆಗೆ ಫೋನ್ ಮಾಡಿ ನನ್ನನ್ನು ಕರೆಸಿರುತ್ತಾರೆ. ನಾನು ಹೋದಾಗ ಪೋಲೀಸ್ ಠಾಣೆಗೆ ಹೋದಾಗ 1 ನೇ ಆರೋಪಿ ಠಾಣೆಯಲ್ಲಿ ಇದ್ದರು. ಪೋಲೀಸರು ಆತನನ್ನು ಕೂರಿಸಿದ್ದರು. 1 ನೇ ಆರೋಪಿ ಕೂತಿದ್ದಾಗ ಆತನ ಕೈಯಲ್ಲಿ ದೊಣ್ಣೆ ಇರಲಿಲ್ಲ. ಪೋಲೀಸರು ದೊಣ್ಣೆಯನ್ನು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಪೋಲೀಸರು ದೊಣ್ಣೆಯನ್ನು 1 ನೇ ಆರೋಪಿ ಕೈಗೆ ಕೊಟ್ಟು ಫೋಟೋ ತೆಗೆಸಿರುತ್ತಾರೆ ಎಂದರೆ ಸರಿ.

ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಹಿ ಹಾಕಲು ಹೇಳಿದ್ದರಿಂದ ಸಹಿ ಹಾಕಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**